**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯಪುರ**

**ಎಸ್.ಸಿ. ನಂ.88/2024**

**ಫಿರ್ಯಾದಿದಾರರು:** ಕರ್ನಾಟಕ ಸರ್ಕಾರದ ಪರವಾಗಿ
ಇಂಡಿ ಪೊಲೀಸ್ ಠಾಣೆ

**ವಿರುದ್ಧ**

**ಆರೋಪಿ:** ದಾನಯ್ಯ ತಂ. ಚಿದಾನಂದ ಹಿರೇಮಠ

**ದೋಷಾರೋಪಣೆ**

ನಾನು **ಡಾ. ಕಸನಪ್ಪ ನಾಯ್ಕ**, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ ಈ ಮೂಲಕ ನಿಮ್ಮ ವಿರುದ್ಧ ಈ ಕೆಳಕಾಣಿಸಿದ ಆಪಾದನೆಗಳನ್ನು ರೂಪಿಸಿರುತ್ತೇನೆ.

**ಆರೋಪಿ**:

ದಾನಯ್ಯ ತಂ. ಚಿದಾನಂದ ಹಿರೇಮಠ,
ವಃ 34 ವರ್ಷ, ಸಾಃ ಇಂಡಿ ಪಟ್ಟಣದ ವಿಜಯಪುರ
ರಸ್ತೆಯ ಮೈದರಗಿ ಕಾಂಪ್ಲೆಕ್ಸ ಹಿಂದೆ ಕೆ.ಇ.ಬಿ.,
ತಾಃ ಇಂಡಿ, ಜಿ. ವಿಜಯಪುರ
(ಸ್ವಂತ ವಿಳಾಸಃ ಜಾಲವಾದ, ತಾಃ ದೇವರ ಹಿಪ್ಪರಗಿ,
ಜಿ. ವಿಜಯಪುರ)
(ತಳೇಗಾಂವ ದಾಬಾಡಿ ಗ್ರಾಮದ ಯಶವಂತ ಓಣಿಯ
ಬಾಲಾಜಿ ದೇವಸ್ಥಾನ ಹಿಂದೆ ತಾಃ ಮಾವಳಿ,
ಜಿ. ಪುಣೆ, ಮಹಾರಾಷ್ಟ್ರ ರಾಜ್ಯ)

ಮೊದಲನೆಯದಾಗಿ, ನೀನು ಆರೋಪಿ ನಿನ್ನ ಹೆಂಡತಿಯಾದ ಶ್ರೀಮತಿ ಶಿಲ್ಪಾ ಹಿರೇಮಠ ಇವರು ಬೇರೆ ಗಂಡಸಿನ ಜೊತೆ ಅಕ್ರಮ ಸಂಬಂಧ ಇಟ್ಟುಕೊಂಡಿರುತ್ತಾಳೆಂದು ಸಂಶಯಗೊಂಡು ಶಿಲ್ಪಾರವಳೊಂದಿಗೆ ಜಗಳ ತೆಗೆಯುತ್ತಿದ್ದು ಈ ಬಗ್ಗೆ ಫಿರ್ಯಾದಿ ಹಾಗೂ ಫಿರ್ಯಾದಿ ತಾಯಿ ಶ್ರೀಮತಿ

ಭಾರತಿ ಮಠಪತಿ ಕೂಡಿಕೊಂಡು ಆರೋಪಿ ಆದ ನಿನಗೆ ಮತ್ತು ಶಿಲ್ಪಾಳಿಗೆ ಬುದ್ದಿವಾದ ಹೇಳಿದ್ದರೂ, ನೀನು ಆರೋಪಿ ಶಿಲ್ಪಾ ಹಿರೇಮಠ ಬೇರೆ ಗಂಡಸಿನ ಜೊತೆ ಅಕ್ರಮ ಸಂಬಂಧ ಇಟ್ಟುಕೊಂಡಿರುತ್ತಾಳೆಂದು ಸಂಶಯಗೊಂಡು ಅವಳ ಕೊಲೆ ಮಾಡುವ ಉದ್ದೇಶದಿಂದ ದಿನಾಂಕ 04.06.2023 ರಂದು ರಾತ್ರಿ 10-00 ಗಂಟೆಗೆ ಇಂಡಿ ಪಟ್ಟಣದ ವಿಜಯಪುರ ರಸ್ತೆಯ ಕೆ.ಇ.ಬಿ. ಎದುರು ಮೈದರಗಿ ಕಾಂಪ್ಲೆಕ್ಸ ಹಿಂದುಗಡೆ ಗಣೇಶನಗರದಲ್ಲಿರುವ ಮೋಹನ ನಿಲಯದ ನೆಲಮಹಡಿಯಲ್ಲಿರುವ ಮನೆಯಲ್ಲಿ ಶಿಲ್ಪಾ ತನ್ನ ಇಬ್ಬರು ಮಕ್ಕಳೊಂದಿಗೆ ಮನೆಯಲ್ಲಿದ್ದಾಗ ನೀನು ಆರೋಪಿ ಶಿಲ್ಪಾ ಜೊತೆಗೆ ಜಗಳತೆಗೆದು ನೀನು ತಂದಿದ್ದ ಸರ್ಜಿಕಲ್ ಬ್ಲೇಡದಿಂದ ಶಿಲ್ಪಾ ಕುತ್ತಿಗೆಯ ಮೇಲೆ ಕೊಯ್ದು ತೀವ್ರವಾದ ರಕ್ತಗಾಯ ಮಾಡಿ ಕೊಲೆ ಮಾಡಲು ಪ್ರಯತ್ನಿಸಿ, ತನ್ಮೂಲಕ ಭಾರತೀಯ ದಂಡ ಸಂಹಿತೆ ಕಲಂ 307 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ವಿಚಾರಣಾ ಸಂಜ್ಞೆಯೊಳಗಡೆ ಮಾಡಿರುವಿ.

ಕೊನೆಯದಾಗಿ, ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿ ಆದ ನೀನು ಗಾಯಾಳು ಶಿಲ್ಪಾ ಹಿರೇಮಠ ಜೊತೆ ಜಗಳತೆಗದು ಅಪಾಯಕಾರಿ ಆಯುಧವಾದ ಸರ್ಜಿಕಲ್ ಬ್ಲೇಡದಿಂದ ಶಿಲ್ಪಾ ಕುತ್ತಿಗೆಯ ಮೇಲೆ ಕೊಯ್ದು ತೀವ್ರವಾಗಿ ಸ್ವರೂಪದ ರಕ್ತಗಾಯ ಮಾಡಿ, ತನ್ಮೂಲಕ ಭಾರತೀಯ ದಂಡ ಸಂಹಿತೆ ಕಲಂ 326 ರಡಿಯಲ್ಲಿ ಶಿಕ್ಷಾರ್ಹ

ಅಪರಾಧವನ್ನು ಈ ನ್ಯಾಯಾಲಯದ ವಿಚಾರಣಾ ಸಂಜ್ಞೆಯೊಳಗಡೆ ಮಾಡಿರುವಿ.

ಈ ಮೇಲೆ ಹೇಳಿದ ಅಪರಾಧಕ್ಕಾಗಿ ಆರೋಪಿತರಾದ ನೀವು ನನ್ನಿಂದ ಈ ನ್ಯಾಯಾಲಯದಲ್ಲಿ ಅಧಿವಿಚಾರಣೆಗೆ ಒಳಪಡಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**(ಡಾ. ಕಸನಪ್ಪ ನಾಯ್ಕ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ವಿಜಯಪುರ.**

ದಿನಾಂಕಃ 26.03.2025